ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 09ನೇ ಮಾರ್ಚ್, 2020

ಅರಣ್ಯ ಪ್ರದೇಶಗಳ ಒತ್ತುವರಿ ಬಗ್ಗೆ

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

401 (428) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಾಸನ ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; (ಸರ್ವೆ ನಂ. ವಿಸ್ತೀರ್ಣ, ಹೋಬಳಿ ಗ್ರಾಮ ಸಹಿತ ವಿವರ ಒದಗಿಸುವುದು)

(ಆ) ಅರಣ್ಯ ಪ್ರದೇಶದ ಜಮೀನನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ ; (ಹೋಬಳಿ, ಗ್ರಾ.ಸ. ನಂ.ವಿಸ್ತೀರ್ಣ ಸಹಿತ ಒತ್ತುವರಿ ಪೂರ್ಣ ಮಾಹಿತಿ ಒದಗಿಸುವುದು)

(ಇ) ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರ ವಿಧಿಸಿರುವ ದಂಡದ ಮತ್ತವೆಷ್ಟು; (ಹೋಬಳಿ, ಗ್ರಾ.ಸಂ.ನಂ. ವಿಸ್ತೀರ್ಣ ಸಹಿತ ಒತ್ತುವರಿ ಮಾಹಿತಿ ಒದಗಿಸುವುದು)

(ಈ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯನ್ನೇ ನಂಬಿ ಜೀವನ ಸಾಗಿಸುತ್ತಿರುವ ಬಡ ಕುಟುಂಬಗಳ ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ ಅಥವಾ ಮಾಡಲಾಗುವುದೇ ;

(ಉ) ಹಾಸನ ಜಿಲ್ಲೆಯಲ್ಲಿ ಎಷ್ಟು ಜನ ಒತ್ತುವರಿದಾರರಿಗೆ ಭೂ ಮಂಜೂರಾತಿ ನೀಡಲಾಗಿದೆ ? (ಒತ್ತುವರಿದಾರರ ಹೆಸರು, ಗ್ರಾಮ, ಹೋಬಳಿವಾರು, ತಾಲ್ಲೂಕು, ಸ.ನಂ. ವಿಸ್ತೀರ್ಣ, ಹಾಗೂ ಮಂಜೂರಾತಿ ಪತ್ರದ ನಕಲು ಸಹಿತ ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)